ದಿನಾಂಕ : DATE
ಪತ್ರಿಕೆಯ ಹೆಸರು : NAME OF THE NEWS PAPER:
DEPARTMENT / SUBJECT

## ಖರ್ಚಿಗೆ ಸೀಮಿತವಾದ ರಾಜ್ಯದ ಎರಡನೇ ಶಕ್ತಿ ಕೇಂದ್ರ । ಬಳಸದಿದ್ದರೂ ನಿರ್ವಹಣೆಗಾಗಿ ತಿಂಗಳಿಗೆ ಅರ್ಧ ಕೋಟಿ

# ಸುವರ್ಣ ವಿಧಾನಸೌಧವೇ ಉತ್ತರ ಕರ್ನಾಟಕದ ದೊಡ್ಡ ಸಮಸ್ಯೆ!

■ **ಪ್ರಮೋದ ಹರಿಕಾಂತ** ಬೆಳಗಾವಿ
pramod.harikant@timesgroup.com

ಉತ್ತರ ಕರ್ನಾಟಕದ ಜನರ ಸಮಸ್ಯೆಗಳಿಗೆ ಸ್ಪಂದಿಸಲು 438 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ಸುವರ್ಣ ವಿಧಾನಸೌಧ ಬಿಳಿಯಾನೆಯಂತಾಗಿದೆ. ಬಳಕೆಯಾಗದಿದ್ದರೂ ನಿರ್ವಹಣೆಗಾಗಿಯೇ ಪ್ರತಿ ತಿಂಗಳಿಗೆ ಅರ್ಧ ಕೋಟಿ ರೂ. ಖರ್ಚು ಮಾಡಲಾಗುತ್ತಿದೆ!

ಗಡಿ ಜಿಲ್ಲೆಯ ಅಭಿವೃದ್ಧಿಯಾಗಬೇಕು, ಉತ್ತರ ಕರ್ನಾಟಕ ಸವಾಲುಗಳಿಗೆ ಪರಿಹಾರವಾಗಬೇಕು ಎನ್ನುವ ಉದ್ದೇಶದೊಂದಿಗೆ ಸುವರ್ಣ ವಿಧಾನಸೌಧ ನಿರ್ಮಿಸಲಾಗಿತ್ತು. ಆದರೆ, ಈಗ ಆ ಸುವರ್ಣ ವಿಧಾನಸೌಧವೂ ಉತ್ತರ ಕರ್ನಾಟಕದ ಸಮಸ್ಯೆಗಳ ಪಟ್ಟಿಯಲ್ಲಿ ಸೇರಿಕೊಂಡಿದೆ. 60,398 ಮೀಟರ್ ಸುತ್ತಳತೆಯ ವಿಶಾಲವಾದ ಕಟ್ಟಡ ಮತ್ತು ಅದರಲ್ಲಿರುವ ಹತ್ತಾರು ಕೋಟಿ ಬೆಲೆಯ ಸಾಮಗ್ರಿಗಳನ್ನು ಬಳಸುವುದಕ್ಕಿಂತ ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ.

ಜಗದೀಶ್ ಶೆಟ್ಟರ್ ಸಿಎಂ ಆಗಿದ್ದಾಗ 2012ರಲ್ಲಿ ಸುವರ್ಣ ಸೌಧ ಉದ್ಘಾಟನೆಯಾಗಿತ್ತು. ಅಂದಿನಿಂದ ಸೌಧದ ನಿರ್ಮಾಣ ಖರ್ಚು ಬಿಟ್ಟು,



ನಿರ್ವಹಣೆಗಾಗಿಯೇ ಈವರೆಗೆ 70 ಕೋಟಿ ರೂ.ಗೂ ಹೆಚ್ಚು ಹಣ ವಿನಿಯೋಗಿಸಲಾಗಿದೆ. ಈ ಏಳು ವರ್ಷಗಳಲ್ಲಿ ರಾಜ್ಯ ಸರಕಾರ ಸೌಧವನ್ನು ಅಧಿವೇಶನಕ್ಕಾಗಿ ಬಳಸಿದ್ದು ಕೇವಲ 70 ದಿನ ಮಾತ್ರ. ಈ ವರ್ಷವಂತೂ ಸ್ವಚ್ಛತೆ ಬಿಟ್ಟು ಬೇರಾವ ಕಾರ್ಯಕ್ಕೂ ಸುವರ್ಣ ಸೌಧದ ಬಾಗಿಲು ತೆರೆದೇ ಇಲ್ಲ.

20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಹೆಲಿಪ್ಯಾಡ್‌ನಲ್ಲಿ ಹೆಲಿಕಾಪ್ಟರ್ ಲ್ಯಾಂಡ್ ಆಗಿದ್ದು ಮೂರು ಬಾರಿಯಷ್ಟೆ. ಸೌಧದ ಸೌಂದರ್ಯ ವೃದ್ಧಿಗೆ ಲೇಸರ್ ಲೈಟ್ ವ್ಯವಸ್ಥೆ ಇದೆ. ವರ್ಷಕ್ಕೊಮ್ಮೆ ಬಳಸುವುದಕ್ಕೂ ದುರಸ್ತಿಗೆಂದು ಸಾವಿರಾರು ರೂ. ಖರ್ಚು ಮಾಡಲಾಗುತ್ತಿದೆ. ಹೀಗೆ ಸುವರ್ಣ ವಿಧಾನ ಸೌಧದಲ್ಲಿ ಆಡಳಿತಕ್ಕಿಂತ ಖರ್ಚಿನ ಇತಿಹಾಸವೇ ದೊಡ್ಡದಾಗಿ ಬೆಳೆಯುತ್ತಿದೆ.

### ಸುವರ್ಣ ಸೌಧದ ಖರ್ಚು ವೆಚ್ಚ

| | |
|---|---|
| ● ನಿರ್ಮಾಣ ವೆಚ್ಚ | **438** ಕೋಟಿ ರೂ. |
| ● ವಾರ್ಷಿಕ ನಿರ್ವಹಣೆ | **6** ಕೋಟಿ ರೂ. |
| ● ಸೌಧ ಬಳಕೆ | **7** ವರ್ಷದಲ್ಲಿ **70** ದಿನ |
| ● ಹೆಲಿಪ್ಯಾಡ್ ಬಳಕೆ | **4** ವರ್ಷದಲ್ಲಿ **3** ಬಾರಿ |
| ● ಒಂದು ದಿನದ ಖರ್ಚು | **1.64** ಲಕ್ಷ ರೂ. |
| ● ಒಟ್ಟು ಖರ್ಚು | **500** ಕೋಟಿ ರೂ. |

### ಭೌಗೋಳಿಕ ವಿವರ

| | |
|---|---|
| ಆವರಣ ವಿಸ್ತಾರ | **127** ಎಕರೆ |
| ಕಟ್ಟಡದ ಸುತ್ತಳತೆ | **60,398** ಮೀ. |

### ನಡೆದು ಬಂದ ಹಾದಿ

**2007**– ಎಚ್.ಡಿ. ಕುಮಾರಸ್ವಾಮಿ ಅಡಿಗಲ್ಲು
**2009**– ಬಿ.ಎಸ್. ಯಡಿಯೂರಪ್ಪ ಭೂಮಿ ಪೂಜೆ.
**2019**– ಸಿಎಂ ಜಗದೀಶ್ ಶೆಟ್ಟರ್ ಅವಧಿಯಲ್ಲಿ ಆರಂಭ
**2012 ಅ.11**– ರಾಷ್ಟ್ರಪತಿ ಪ್ರಣವ್ ಮುಖರ್ಜಿ ಉದ್ಘಾಟನೆ

ಬೆಳಗಾವಿ ನಗರದಿಂದ ಸುಮಾರು 9 ಕಿ.ಮೀ. ದೂರದ ಹಲಗಾ ಗ್ರಾಮದಲ್ಲಿ ಈ ಸುವರ್ಣ ಸೌಧ ಇದೆ. ಈವರೆಗೆ ಇಲ್ಲಿ ಏಳು ಅಧಿವೇಶನಗಳು ನಡೆದಿವೆ. ಆದರಿಂದ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿರಲಿ ಸುತ್ತಲಿನ ಗ್ರಾಮಗಳೇ ಸುಧಾರಣೆ ಆಗಿಲ್ಲ. ಅಧಿಕಾರಿಗಳಿಗಂತೂ ಸೌಧದ ಪೀಠೋಪಕರಣ, ಸಾಮಗ್ರಿ ಕಾಪಾಡುವುದೇ ಗೋಳಾಗಿದೆ.

**ಕಚೇರಿ ಸ್ಥಳಾಂತರ ಕಷ್ಟ:** ರಾಜ್ಯ ಮಟ್ಟದ ಏಳು ಕಚೇರಿಗಳನ್ನು ಸುವರ್ಣ ಸೌಧಕ್ಕೆ ಸ್ಥಳಾಂತರಿಸುವುದು ಸುಲಭವಲ್ಲ. ಇಡೀ ಸೌಧ ತಾತ್ಕಾಲಿಕ ಬಳಕೆಯ ಉದ್ದೇಶದೊಂದಿಗೆ ನಿರ್ಮಿಸಲಾಗಿದೆ. ಅಧಿವೇಶನ ನಡೆಯುವಾಗ ಇಲ್ಲಿಗೆ ರಾಜ್ಯ ಮಟ್ಟದ ಕಚೇರಿಗಳು ತಾತ್ಕಾಲಿಕವಾಗಿ ಸ್ಥಳಾಂತರವಾಗುತ್ತವೆ. ಅವುಗಳಿಗಾಗಿ ಕಡಿಮೆ ವಿಸ್ತಾರದ ಕೊಠಡಿ ನಿರ್ಮಿಸಲಾಗಿದೆ. ಅಲ್ಲದೆ ಅಧಿವೇಶನ ವೇಳೆ ಸೌಧದ ನೆಲಮಾಳಿಗೆಯ ಸುಮಾರು 10 ಕೊಠಡಿ, ಮೂರನೇ ಮಹಡಿಯ ಎರಡು ಕೊಠಡಿಯಷ್ಟೇ ಖಾಲಿ ಉಳಿಯುತ್ತವೆ. ಪೂರ್ಣ ಪ್ರಮಾಣದ ಒಂದು ಕಚೇರಿ ಸ್ಥಳಾಂತರಿಸಲು 5 ರಿಂದ 10 ಕೊಠಡಿ ಬೇಕಾಗುತ್ತವೆ. ಏಳು ಕಚೇರಿಗಳಿಗೆ ಸೌಧದ ಎಲ್ಲ ಕೊಠಡಿಗಳು ಬೇಕು. ಆದರಿಂದ ಅಧಿವೇಶನದ ವೇಳೆ ಕೊಠಡಿ ಕೊರತೆಯಾಗುತ್ತದೆ. ಹಾಗಾಗಿ ಸೌಧದ ಪಕ್ಕದಲ್ಲಿ ಇನ್ನೂ 40 ಕೊಠಡಿಗಳನ್ನು ನಿರ್ಮಿಸಿದರೆ ಈ ಸಮಸ್ಯೆ ನೀಗಿಸಬಹುದು. ಅದಕ್ಕೆ 20ರಿಂದ 25 ಕೋಟಿ ರೂ. ಬೇಕು ಎನ್ನುತ್ತಾರೆ ಹಿಡಬ್ಲ್ಯುಡಿ ಅಧಿಕಾರಿಗಳು.

**ದುಬಾರಿ ನಿರ್ವಹಣೆ:** ಸೌಧ ನಿರ್ಮಿಸಿದಾಗಿನಿಂದ ನಿರ್ವಹಣೆ ವೆಚ್ಚ ಹೆಚ್ಚುತ್ತಲೇ ಇದೆ. ಮೊದಲು ವಾರ್ಷಿಕ ನಾಲ್ಕು ಕೋಟಿ ರೂ. ಇದ್ದ ವೆಚ್ಚ ಈಗ ಆರು ಕೋಟಿ ರೂ.ಗೆ ಏರಿದೆ. ಲೋಕೋಪಯೋಗಿ ಇಲಾಖೆ ಸೌಧ ನಿರ್ವಹಿಸುತ್ತಿದೆ. ಈಗಂತೂ ಸೌಧದ ವಿದ್ಯುತ್ ಬಿಲ್ಲೇ ವರ್ಷಕ್ಕೆ ಒಂದು ಕೋಟಿ ರೂ. ಸಮೀಪಿಸುತ್ತಿದೆ. ಅಧಿವೇಶನ ನಡೆಯುವಾಗ ಹೆಚ್ಚುವರಿ ಒಂದು ಕೋಟಿ ರೂ. ನಿರ್ವಹಣೆ ವೆಚ್ಚ ಮಾಡಲಾಗುತ್ತದೆ. ಒಟ್ಟಾರೆ ಕಟ್ಟಡ ನಿರ್ಮಾಣ ಸೇರಿ ಈವರೆಗೆ ಸೌಧಕ್ಕೆ ಬರೋಬ್ಬರಿ 500 ಕೋಟಿ ರೂ. ವ್ಯಯವಾಗಿವೆ. ಇಷ್ಟೊಂದು ದೊಡ್ಡ ಮಟ್ಟದ ಹಣ ವಿನಿಯೋಗವಾಗುತ್ತಿರುವ ಕಾರಣಕ್ಕಾಗಿಯೇ ನಿರ್ವಹಣೆ ಹೊಣೆ ಪಡೆಯಲು ವಿಧಾನಸಭೆ ಸಚಿವಾಲಯ ಮತ್ತು ಲೋಕೋಪಯೋಗಿ ಇಲಾಖೆ ನಡುವೆ ಜಟಾಪಟಿಯೂ ನಡೆದಿತ್ತು.

...KSCCF Compound Rampa Mahakavi Road Chamarajpet, Bengaluru – 560018 (Ph:080-40877666, Fax:080-40877605/606) ... No.9/10/11